**ನಗರ ಭೂ ಸಾರಿಗೆ ನಿರ್ದೇಶನಾಲು**
**ನಗರಾಭಿವೃದ್ಧಿ ಇಲಾಖೆ**
**ಕರ್ನಾಟಕ ಸರ್ಕಾರ**

ಸಂಖ್ಯೆ: DULT-ADM0CARE(HSTA)/3/2023 ದಿನಾಂಕ: 06.02.2024

## ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಬೇಕಿರುವ ಸಿಬ್ಬಂದಿಗಳ ನೇಮಕಾತಿಗಾಗಿ ಅಧಿಸೂಚನೆ

ನಗರ ಭೂ ಸಾರಿಗೆ ನಿರ್ದೇಶನಾಲಯದ ವತಿಯಿಂದ ಈ ಕೆಳಗಿನ ಹುದ್ದೆಗಳಿಗೆ ಸೂಕ್ತ, ಜ್ಞಾನ, ವಿದ್ಯಾರ್ಹತೆ ಮತ್ತು ಸಮರ್ಪಣಾ ಭಾವ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಈ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಯ ಒಪ್ಪಂದದ ಮೇರೆಗೆ ನೇಮಕ ಮಾಡಿ (ಅಭ್ಯರ್ಥಿಯ ಕಾರ್ಯನಿರ್ವಹಣೆಯು ಮೊದಲ ವರ್ಷದ ಕೊನೆಗೆ ನಡೆಸುವ ಮೌಲ್ಯಾಂಕನ ತೃಪ್ತಿಕರವಾಗಿದ್ದ ಪಕ್ಷದಲ್ಲಿ) ಉತ್ತಮ ಕಾರ್ಯನಿರ್ವಹಣೆ ತೋರಿಸುವ ಅಭ್ಯರ್ಥಿಗಳನ್ನು ಪುನ ಒಂದು ವರ್ಷದ ಅವಧಿಗೆ ಮುಂದುವರೆಸಲಾಗುವುದು. ಅಭ್ಯರ್ಥಿಗಳು ತಮ್ಮ ಆದ್ಯತೆ ಮತ್ತು ಅನುಭವದ ಆಧಾರದ ಮೇಲೆ ಕೆಳಗೆ ತಿಳಿಸಲಾದ ಯಾವುದೇ ಒಂದು ಹುದ್ದೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 20.02.2024 ಸಂಜೆ 5:30 ಗಂಟೆ ಆಗಿರುತ್ತದೆ. ಅಭ್ಯರ್ಥಿಗಳು ತಮ್ಮ ಜಿ-ಮೇಲ್ ಐಡಿಯನ್ನು ಬಳಸಿಕೊಂಡು ಕೆಳಗೆ ನೀಡಲಾದ ಲಿಂಕ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕಾಗುತ್ತದೆ. ಬೇರೆ ಯಾವುದೇ ರೀತಿಯಿಂದ ಕಳುಹಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನಗರ ಸಾರಿಗೆ ವಿಶೇಷಜ್ಞರ ಹುದ್ದೆಗಾಗಿ ಲಿಂಕ್
ಅಭಿಯಂತರರು- ಸಿವಿಲ್ ಹುದ್ದೆಗಾಗಿ ಲಿಂಕ್

| ಕ್ರ. ಸಂ. | ಹುದ್ದೆಗಳು | ಅನುಭವ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| 1) | ನಗರ ಸಾರಿಗೆ ವಿಶೇಷಜ್ಞರು | 10 + ವರ್ಷಗಳು | 01 |
| 2) | ಅಭಿಯಂತರರು – ಸಿವಿಲ್<br>(ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆಯ ದರ್ಜೆಗೆ ಸಮಾನದ) | 15 + ವರ್ಷಗಳು | 01 |

ಹುದ್ದೆಗಳಿಗಾಗಿ ಬೇಕಾದ ವಿದ್ಯಾರ್ಹತೆ ಹಾಗೂ ಅನುಭವಗಳನ್ನು ಈ ಕೆಳಗೆ ನೀಡಲಾಗಿದೆ.

**ನಗರ ಸಾರಿಗೆ ವಿಶೇಷಜ್ಞರು:**

**ಮುಖ್ಯ ಜವಾಬ್ದಾರಿಗಳು:**

- ಕರ್ನಾಟಕದ ನಗರ ಪ್ರದೇಶಗಳ ನಗರ ಸಾರಿಗೆಗೆ ಸಂಬಂಧಿಸಿದ ಧೃಡವಾದ / ಬಲವಾದ ದತ್ತಾಂಶ ವ್ಯವಸ್ಥೆಯನ್ನು ವೇಳಾ ಮಿತಿಯೊಳಗೆ ಹಾಗೂ ಉತ್ಪನ್ನದ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಗೊಳಿಸಿ ನಿರ್ವಹಿಸುವುದು.
- ನಗರ ಸಾರಿಗೆ ಮೂಲಭೂತ ಸೌಕರ್ಯಗಳ ವಿನ್ಯಾಸಗಳನ್ನು ಅಭಿವೃದ್ಧಿಗೊಳಿಸುವುದು.

- ವಾಸ್ತು ವಿನ್ಯಾಸದ ನಕ್ಷೆಗಳನ್ನು ರಚಿಸಲು ಬೇಕಾದ ತಾಂತ್ರಿಕ ಸಹಾಯವನ್ನು ತಂಡದ ಕಿರಿಯ ಸದಸ್ಯರಿಗೆ ನೀಡುವುದು.
- ನಗದು ಅಂದಾಜುಗಳನ್ನು ರಚಿಸುವುದು ಹಾಗೂ ಅವುಗಳನ್ನು ಪರಿಶೀಲಿಸುವುದು.
- ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತೆ ತಂಡಗಳನ್ನು ಮುನ್ನಡೆಸುವುದು.
- ಉಳಿದ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು, ಸಂಶೋಧನ ಕೇಂದ್ರಗಳು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ರಾಜ್ಯಮಟ್ಟದಲ್ಲಿ ಸಹಯೋಗ ಏರ್ಪಡಿಸುವುದು.
- ಸಮರ್ಥ ದಾಖಲಾತಿ ಮತ್ತು ದತ್ತಾಂಶ ಸಂಘಟನೆಯೊಂದಿಗೆ ಪ್ರಸ್ತುತಿಗಳು, ತಾಂತ್ರಿಕ ಲೇಖನಗಳು, ನೀತಿ ವಿಶ್ಲೇಷಣೆಯ ಟಿಪ್ಪಣಿಗಳು, ಸಂಶೋಧನಾ ವರದಿಗಳನ್ನು ಹಾಗೂ ದಾಖಲಾತಿಗಳನ್ನು ಸಿದ್ಧಪಡಿಸುವುದು.
- ಅಗತ್ಯತೆ ಆಧಾರದ ಮೇಲೆ ರಾಜ್ಯಾದ್ಯಂತ ಸಭೆ/ ಚರ್ಚೆಗಳನ್ನು ನಡೆಸಲು ಕ್ಷೇತ್ರ ವೀಕ್ಷಣೆಗಾಗಿ ಸಂಚರಿಸಬೇಕು.
- ವರದಿಸುವ ಅಧಿಕಾರಿ ವಹಿಸುವ ಇತರೆ ಕಾರ್ಯಗಳು.

**ಅವಶ್ಯಕತೆಗಳು:**

- ಸಾರಿಗೆ ಯೋಜನೆ ಹಾಗೂ ಸಾರಿಗೆ ಇಂಜಿನಿಯರಿಂಗ್ ವಿಷಯಗಳಲ್ಲಿ ಮಾಸ್ಟರ್ಸ್ ಪದವಿ ಅಥವಾ ತತ್ಸಮಾನ ಅಥವಾ ಹೆಚ್ಚಿನ ಪದವಿ ಹೊಂದಿರತಕ್ಕದ್ದು.
- ನಗರ ಸಾರಿಗೆ ವ್ಯವಸ್ಥೆಯ ಯೋಜನೆ ಸಂಶೋಧನೆಯಲ್ಲಿ ಅನುಷ್ಠಾನ / ವಿನ್ಯಾಸ ವಿಷಯದಲ್ಲಿ 10 ಕ್ಕಿಂತ ಹೆಚ್ಚು ವರ್ಷಗಳ ಸಂಬಂಧಿತ ಪೂರ್ಣಾವಧಿಯ ಕೆಲಸದ ಅನುಭವ.
- ಚಿಕ್ಕ ಹಾಗೂ ಬೃಹದಾಕಾರದ ಸಾರಿಗೆ ಯೋಜನೆ ಅನುಷ್ಠಾನದ ಅಭಿವೃದ್ಧಿಯಲ್ಲಿ ಅನುಭವ.
- ನಗರ ಸಾರಿಗೆಗೆ ಸಂಬಂಧಿಸಿದ ವಿಧಾನಗಳನ್ನು, ಗುಣಾತ್ಮಕ ಹಾಗೂ ಪರಿಮಾಣಾತ್ಮಕವಾಗಿ ವಿಶ್ಲೇಷಣೆಗಳಿಗೊಳಪಡಿಸುವ ಬಲವಾದ ಸಾಮರ್ಥ್ಯದೊಂದಿಗೆ, ನಗರ ಸಾರಿಗೆ ಮೂಲ ಮಾಹಿತಿಯ ಅಂಕಿ-ಅಂಶಗಳ ವಿಶ್ಲೇಷಣೆಯ ಪರಿಚಯ ಹೊಂದಿರಬೇಕು.
- ಭೌಗೋಳಿಕವಾಗಿ ಲಭ್ಯವಾಗುವ ಮಾಹಿತಿಯನ್ನು ಯೋಜನೆ ಮಾಡಲು ಹಾಗೂ ದತ್ತಾಂಶ ವಿಶ್ಲೇಷಣೆ ಮಾಡುವ ಹಾಗೂ ಸಂಶೋಧನೆ ಮಾಡುವ ಸಾಮರ್ಥ್ಯ ಹೊಂದಿರಬೇಕು. ವಿವಿಧ ಯೋಜನೆಗಳ ರಚನೆಗೆ ಬೇಕಾದ ವರದಿಯನ್ನು ರಚಿಸುವ ಸಾಮರ್ಥ್ಯ ಹೊಂದಿರಬೇಕು.
- ಸಂಬಂಧಿತ ಕೋಡಗಳ ಅಭಿವೃದ್ಧಿ, ಮಾನಕಗಳು ಮತ್ತು ರೆಗ್ಯೂಲೇಷನ್‌ಗಳ ಕುರಿತ ಆಳವಾದ ಜ್ಞಾನ ಹೊಂದಿರತಕ್ಕದ್ದು.
- ಸಾರ್ವಜನಿಕ ವಲಯದ ಹಾಗೂ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡಿದ ಅನುಭವ ಅಪೇಕ್ಷಣೀಯ.
- ಜಟಿಲ ಹಾಗೂ ತಾಂತ್ರಿಕ ಮಾಹಿತಿಯನ್ನು ಸ್ಪಷ್ಟ ಮತ್ತು ಸಂಕ್ಷಿಪ್ತ ರೀತಿಯಲ್ಲಿ (ವರದಿಗಳು /ಪ್ರಸ್ತುತಿಗಳು) ಇಂಗ್ಲಿಷ್ ಭಾಷೆಯಲ್ಲಿ ಬಲವಾಗಿ ಪ್ರಸ್ತುತಪಡಿಸುವ ಸಾಮರ್ಥ್ಯ ಹೊಂದಿರಬೇಕು.
- ಕನ್ನಡ ಭಾಷೆಯ ಪ್ರಾವಿಣ್ಯತೆಯು ಬಲವಾದ / ಅನುಕೂಲವಾದ ಅರ್ಹತೆಯಾಗಿದೆ.

**ಅಭಿಯಂತರರು- ಸಿವಿಲ್ (ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆಯ ದರ್ಜೆಗೆ ಸಮಾನದ ) :**

**ಮುಖ್ಯ ಜವಾಬ್ದಾರಿಗಳು:**

- ನಗದು ಅಂದಾಜುಗಳನ್ನು ರಚಿಸುವುದು ಹಾಗೂ ತೀವ್ರವಾಗಿ ಪರಿಶೀಲಿಸುವುದು.
- ಸಿವಿಲ್ ಇಂಜಿನಿಯರಿಂಗ್ ಯೋಜನೆಗಳ ಮೇಲುಸ್ತುವಾರಿಯೊಂದಿಗೆ ನಿರ್ವಹಿಸುವುದು.
- ತಂಡದ ಕಿರಿಯ ಸದಸ್ಯರಿಗೆ ವಾಸ್ತು ವಿನ್ಯಾಸಗಳ ಮತ್ತು ವಿವರಗಳ ರಚನೆಗಾಗಿ ತಾಂತ್ರಿಕ ಸಹಾಯವನ್ನು ನೀಡುವುದು.
- ತಂಡವು ಸ್ವತಂತ್ರವಾಗಿ ಕಾರ್ಯನಿರ್ವಹಿಸವಂತೆ ಮುನ್ನಡೆಸುವುದು.

- ಯೋಜನೆಗಳು ಪೂರ್ಣಗೊಳ್ಳುವವರೆಗೂ ಗುಣಮಟ್ಟ ನಿಯಂತ್ರಣಗಳನ್ನು ಸುನಿಶ್ಚಿತಗೊಳಿಸುವುದು.
- ಅನುಕ್ರಮವಾಗಿ ತಪಾಸಿಸಿ ರಚಿಸಿದ ನಕ್ಷೆಗಳಂತೆ ಯೋಜನೆಗಳ ಅನುಷ್ಠಾನಗೊಳ್ಳುವುದನ್ನು ಸುನಿಶ್ಚಿತಗೊಳಿಸುವುದು.
- ಮುಂದೆ ಘಟಿಸಬಹುದಾದ ರಿಸ್ಕಗಳನ್ನು ಗುರುತಿಸಿ ಅವುಗಳು ಘಟಿಸದಂತೆ ಜಾಗ್ರತೆವಹಿಸುವುದು.
- ಯೋಜನೆಗಳು ಒದಗಿಸಿದ ಆಯವ್ಯಯ ಹಾಗೂ ವೇಳಾ ಮಿತಿಗಳೊಳಗೆ ಮುಕ್ತಾಯವಾಗಲು ಬೇಕಾದ ಮುಂಜಾಗ್ರತ ಕ್ರಮ ತೆಗೆದುಕೊಳ್ಳುವುದು.
- ಅಗತ್ಯತೆ ಆಧಾರದ ಮೇಲೆ ರಾಜ್ಯಾದ್ಯಂತ ಸ್ಥಳ ಪರಿವೀಕ್ಷಣೆ ಹಾಗೂ ಸಮಾಲೋಚನೆಗಾಗಿ ಸಂಚರಿಸುವುದು.
- ಆಯುಕ್ತರು ವಹಿಸುವ ಇನ್ನಿತರೆ ಜಾವಾಬ್ದಾರಿಗಳು.

**ಅವಶ್ಯಕತೆಗಳು:**

- ಸಿವಿಲ್ ಇಂಜಿನಿಯರಿಂಗ್ ಪದವಿಯೊಂದಿಗೆ, ನಗರ ರಸ್ತೆಗಳು ಮತ್ತು ಸಿವಿಲ್ ಇಂಜಿನಿಯರಿಂಗ್ ಯೋಜನೆಗಳ ವಿಷಯದಲ್ಲಿ ಕಾರ್ಯಪಾಲಕ ಅಭಿಯಂತರರ ದರ್ಜೆಗೆ ಸಮಾನದ ಸೇವೆಯಲ್ಲಿ, ಕನಿಷ್ಠ 15 ವರ್ಷಗಳ ಅನುಭವ ಹೊಂದಿರತಕ್ಕದ್ದು.
- ಏಕಕಾಲದಲ್ಲಿ ವಿವಿಧ ಯೋಜನೆಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿರತಕ್ಕದ್ದು.
- ತಂಡ ನಿರ್ವಹಿಸುವ ಕೌಶಲ್ಯದೊಂದಿಗೆ ನಾಯಕತ್ವ ಗುಣ ಹೊಂದಿರಬೇಕು.
- ತಾಂತ್ರಿಕ ಮಾಹಿತಿಯನ್ನು ಸ್ಪಷ್ಟ ಹಾಗೂ ಸಂಕ್ಷಿಪ್ತವಾಗಿ (ಪ್ರಸ್ತುತಿಗಳು ಹಾಗೂ ವರದಿಗಳು) ಇಂಗ್ಲಿಷ್ ನಲ್ಲಿ ಪ್ರಸ್ತುತ ಪಡಿಸುವ ಉತ್ತಮ ಸಾಮರ್ಥ್ಯ ಹೊಂದಿರತಕ್ಕದ್ದು.
- ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಹೊಂದಿರುವುದು ಅಗತ್ಯವಾಗಿದೆ.
- ಅತ್ಯುತ್ತಮ ಸಂವಹನ ಸಾಮರ್ಥ್ಯ ಮತ್ತು ಪರಸ್ಪರ ಕೌಶಲ್ಯಗಳನ್ನು ಹೊಂದಿರತಕ್ಕದ್ದು.
- ಸಂಬಂಧಿತ ನಿರ್ಮಾಣ ಸಂಕೇತಗಳು, ಸ್ಟ್ಯಾಂಡರ್ಡ್ಸ್ ಮತ್ತು ರೆಗ್ಯೂಲೇಷನ್‌ಗಳ ಆಳವಾದ ಜ್ಞಾನ ಹೊಂದಿರತಕ್ಕದ್ದು.
- ಸರ್ಕಾರಿ ಕಚೇರಿಗಳು / ಸರ್ಕಾರದ ಯೋಜನೆಗಳ ಜೊತೆಗೆ ಕಾರ್ಯನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು.

ಸಹಿ/-
ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ